# ಮೈಸೂರು ವಿಶ್ವವಿದ್ಯಾನಿಲಯ

(4.0 ಸ್ಕೇಲ್‌ನ 3.47 ಸಿಜಿಪಿಎಯೊಂದಿಗೆ 'ಎ' ಗ್ರೇಡ್‌ಯೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)
(ಎನ್‌ಐಆರ್‌ಎಫ್-2021 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 19ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 34ನೇ ಸ್ಥಾನ)

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ
ಮೈಸೂರು – 570 005

ವಿಷಯ: 2021–22ನೇ ಸಾಲಿನ ಪಿಹೆಚ್.ಡಿ. ಶಿಷ್ಯವೇತನದಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಂಶೋಧನಾ ಶಿಷ್ಯವೇತನವನ್ನು ನೀಡಲು ಸಂಶೋಧಕರನ್ನು ಆಯ್ಕೆ ಮಾಡಿರುವ ಬಗ್ಗೆ

ಉಲ್ಲೇಖ: 1. ವಿ.ವಿ. ಪ್ರಕಟಣೆ ಸಂಖ್ಯೆ:ವಿಫ 8/02/2021-22 ದಿನಾಂಕ: **17-08-2021**
2. ಆಯ್ಕೆ ಸಮಿತಿ ಸಭೆಯ ನಡಾವಳಿ ದಿನಾಂಕ: 07.12.2021

*****

## ಆದೇಶ ಸಂಖ್ಯೆ: ವಿಫ8/02/2021–22 ದಿನಾಂಕ 17.12.2021/934

ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ವತಿಯಿಂದ ನೀಡಲಾಗುವ **2021–22**ನೇ ಸಾಲಿನ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಉಲ್ಲೇಖ (2) ರ ನಡಾವಳಿಯಂತೆ ಈ ಕೆಳಗೆ ಸೂಚಿಸಲಾಗಿರುವ ವಿದ್ಯಾರ್ಥಿಗಳನ್ನು ಸಂಶೋಧನಾ ಶಿಷ್ಯವೇತನಕ್ಕೆ ಆಯ್ಕೆ ಮಾಡಲಾಗಿದೆ. ಸಂಶೋಧನಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿಭಾಗವಾರು ವಿವರ, ಮಾರ್ಗದರ್ಶಕರ ವಿವರ ಹಾಗೂ ಸಂಶೋಧನಾ ಶೀರ್ಷಿಕೆಯ ವಿವರಗಳನ್ನು ಅವರುಗಳ ಹೆಸರಿನ ಮುಂದೆ ನೀಡಲಾಗಿದೆ.

| ಕ್ರ ಸಂ. | ವಿದ್ಯಾರ್ಥಿ ಹೆಸರು ಮತ್ತು ವಿಳಾಸ | ಜಾತಿ | ವಿಭಾಗ | ಮಾರ್ಗದರ್ಶಕರ ಹೆಸರು ಮತ್ತು ವಿಳಾಸ | ಸಂಶೋಧನಾ ಶೀರ್ಷಿಕೆಯ ವಿಷಯ |
|---|---|---|---|---|---|
| 01 | ಗುರುಸ್ವಾಮಿ ವೈ.ಎಸ್.<br>ಬಿನ್ ಸಿದ್ದರಾಮು<br>ವೈ. ಯರಹಳ್ಳಿ (ಗ್ರಾಮ), ಕೊತ್ತತ್ತಿ (ಹೋ) ಮಂಡ್ಯ (ತಾ) ಮತ್ತು ಜಿಲ್ಲೆ | SC | ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ ಮೈಸೂರು | ಡಾ. ಜಿ. ಶೀಲಾ<br>ಸಹ ಪ್ರಾಧ್ಯಾಪಕರು<br>ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ<br>ಮೈಸೂರು | Effectiveness of teaching through info graphics on attitude, critical thinking abilities and academic achievement in physics among secondary school students |
| 02 | ರಾಘವೇಂದ್ರ<br>ಬಿನ್ ಲೇಟ್ ಚಂದ್ರಯ್ಯ<br>ಮಡುವಿನಕೋಡಿ (ಗ್ರಾಮ & ಪೋ)<br>ಬೂಕನಕೆರೆ (ಹೋ)<br>ಕೃಷ್ಣರಾಜಪೇಟೆ (ತಾ), ಮಂಡ್ಯ ಜಿಲ್ಲೆ | SC | ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು | ಡಾ. ಕೆ.ಬಿ. ಪ್ರವೀಣ್<br>ಪ್ರಾಧ್ಯಾಪಕರು<br>ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ<br>ಮಾ.ಗಂ., ಮೈಸೂರು | A study on impact of covid -19 pandemic situation and its strategies for curriculum transaction among teacher of secondary schools |

ಶಿಷ್ಯವೇತನ ಅವಧಿಯು 05 ವರ್ಷಗಳಾಗಿದ್ದು, ಶಿಷ್ಯವೇತನ, ಸಾದಿಲ್ವಾರು ವೆಚ್ಚವನ್ನು ಮತ್ತು ಶಿಷ್ಯವೇತನ ಪಡೆಯಬೇಕಾದ ಮಾಹೆಯ ಅವಧಿಯಲ್ಲಿ ಮೈಸೂರು ಜಿಲ್ಲೆಗೆ ನಿಗಧಿಯಾದ HRA (ಪ್ರಸ್ತುತ 16%) ಸ್ನಾತಕೋತ್ತರ ಅಧ್ಯಯನ ಕೇಂದ್ರಗಳಾದ ಮಂಡ್ಯ, ಹಾಸನ ಮತ್ತು ಚಾಮರಾಜನಗರ ಗಳಿಗೆ HRA (ಪ್ರಸ್ತುತ 8%) ಯನ್ನು ಈ ಕೆಳಕಂಡಂತೆ ಪಡೆಯಲು ಆದೇಶಿಸಲಾಗಿದೆ.

**ಶಿಷ್ಯವೇತನದ ವಿವರ:**

| ಶಿಷ್ಯವೇತನ | ಶಿಷ್ಯವೇತನದ ಅವಧಿ | ಶಿಷ್ಯವೇತನ | ಮನೆ ಬಾಡಿಗೆ ಭತ್ಯೆ | | ವಾರ್ಷಿಕ ಸಾದಿಲ್ವಾರು ವೆಚ್ಚ |
|---|---|---|---|---|---|
| ಕಿರಿಯ ಶಿಷ್ಯವೇತನ | 2 ವರ್ಷ | 20,000/– | (16%) 3,200/– | (8%) 1,600/– | ಕಲಾ ಮತ್ತು ವಾಣಿಜ್ಯ ವಿಭಾಗ ರೂ. 8,000/–<br>ವಿಜ್ಞಾನ ವಿಭಾಗ ರೂ. 10,000/– |
| ಹಿರಿಯ ಶಿಷ್ಯವೇತನ | 3 ವರ್ಷ | 22,000/– | (16%) 3,520/– | (8%) 1,760/– | ಕಲಾ ಮತ್ತು ವಾಣಿಜ್ಯ ವಿಭಾಗ ರೂ. 10,000/–<br>ವಿಜ್ಞಾನ ವಿಭಾಗ ರೂ. 12,000/– |

ಷರತ್ತುಗಳು:

1. ಸಂಶೋಧನಾ ವಿದ್ಯಾರ್ಥಿಗಳು **ಈ ಆದೇಶ ತಲುಪಿದ ಒಂದು ವಾರದೊಳಗೆ ವರದಿ ಮಾಡಿಕೊಳ್ಳುವುದು**. ಇಲ್ಲದಿದ್ದಲ್ಲಿ ಸಂಶೋಧನಾ ಆಯ್ಕೆಯನ್ನು ನಿಯಮಾನುಸಾರ ರದ್ದುಪಡಿಸಲಾಗುವುದು.
2. ಸಂಶೋಧನೆಗೆ ವರದಿ ಮಾಡಿಕೊಳ್ಳುವಾಗ ಎಲ್ಲಾ ಮೂಲ ದಾಖಲಾತಿಗಳನ್ನು ಅಂದರೆ ಅಂಕಪಟ್ಟಿ, ವಯಸ್ಸಿನ ಮೂಲ ದಾಖಲಾತಿ, ಜಾತಿ ಪ್ರಮಾಣ ಪತ್ರಗಳನ್ನು ವಿಭಾಗಧ್ಯಕ್ಷರ ಸಮ್ಮುಖದಲ್ಲಿ ಹಾಜರುಪಡಿಸುವುದು.
3. ಮೂಲ ದಾಖಲಾತಿಗಳನ್ನು ಪರಿಶೀಲನೆಯೊಂದಿಗೆ ವರದಿ ಮಾಡಿಕೊಂಡ ಬಗ್ಗೆ ವಿಭಾಗಧ್ಯಕ್ಷರ ಮೂಲಕ **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಕಛೇರಿಗೆ ಸಲ್ಲಿಸುವುದು.**
4. ಶಿಷ್ಯವೇತನವು ಅವಧಿಯು ಐದು ವರ್ಷಗಳಾಗಿರುತ್ತದೆ ಮತ್ತು ಪಿಹೆಚ್.ಡಿ. ಮಹಾಪ್ರಬಂಧವನ್ನು ಸಲ್ಲಿಸುವವರೆಗೆ ಇರುತ್ತದೆ ಆದರೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಆ ದಿನಾಂಕಕ್ಕೆ ಶಿಷ್ಯವೇತನ ಕೊನೆಗೊಳ್ಳುತ್ತದೆ.
5. ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನಾ ಪ್ರಗತಿಯ ವರದಿಯ ಆಧಾರದ ಮೇಲೆ ಮತ್ತು ಸಂಬಂಧಿಸಿದ ವಿಭಾಗಗಳ ಅಧ್ಯಕ್ಷರ ಹಾಗೂ ಮಾರ್ಗದರ್ಶಕರ ಶಿಫಾರಸ್ಸಿನ ಮೇರೆಗೆ ಸಂಶೋಧನಾ ಶಿಷ್ಯವೇತನವನ್ನು ಮುಂದುವರೆಸಲಾಗುವುದು.
6. ಶಿಷ್ಯವೇತನ ಪಡೆದ ಒಂದು ವರ್ಷದ ಒಳಗಾಗಿ ಪಿಹೆಚ್.ಡಿ.ಗೆ ಖಾಯಂ ನೋಂದಣಿ (Permanent Registration) ಮಾಡಿಸಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ಶಿಷ್ಯವೇತನ ಹಾಗೂ ಸಾದಿಲ್ವಾರು ವೆಚ್ಚವನ್ನು ಸ್ಥಗಿತಗೊಳಿಸಲಾಗುವುದು.
7. ಶಿಷ್ಯವೇತನಕ್ಕೆ ಆಯ್ಕೆಗೊಂಡ ನಂತರ ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಲ್ಲಿ ವೇತನ/ಶಿಷ್ಯವೇತನ ಪಡೆಯಬಾರದು. ಅಂತಹ ವಿದ್ಯಾರ್ಥಿಗಳು ಕಂಡುಬಂದಲ್ಲಿ ಯಾವುದೇ ಕಾರಣ ಕೇಳದ ಶಿಷ್ಯವೇತನ ರದ್ದುಗೊಳಿಸಲಾಗುವುದು.
8. ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಮಾಸಿಕ **ಶಿಷ್ಯವೇತನದ ಹುಂಡಿಗಳನ್ನು** ಮತ್ತು **ವಾರ್ಷಿಕ ಸಾದಿಲ್ವಾರು ವೆಚ್ಚದ ಹುಂಡಿಯನ್ನು ದ್ವಿಪ್ರತಿಯಲ್ಲಿ** ತಯಾರಿಸಿ, ಹಣಪಾವತಿಗಾಗಿ ಶಿಷ್ಯವೇತನದ ಹುಂಡಿಯ ಮೂಲಕ ಪ್ರತಿ ತಿಂಗಳ ಹಾಜರಾತಿ ಪಟ್ಟಿ ಮತ್ತು ಸಂಶೋಧನಾ ವರದಿಗಳನ್ನು ಮಾರ್ಗದರ್ಶಕರು ಮತ್ತು ವಿಭಾಗಧ್ಯಕ್ಷರ ಶಿಫಾರಸ್ಸಿನೊಂದಿಗೆ **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಕಛೇರಿಗೆ** ಸಲ್ಲಿಸುವುದು.
9. ಸಂಶೋಧಕರು ಆಯಾಯ ತಿಂಗಳ ಶಿಷ್ಯವೇತನವನ್ನು ಆಯಾಯ ತಿಂಗಳಲ್ಲೇ ಪಡೆಯಬೇಕು ಅಂದರೆ ತಿಂಗಳು ಮುಗಿದ 5ನೇ ತಾರೀಖಿನೊಳಗೆ ಹಾಜರಾತಿ ಪಟ್ಟಿಯೊಂದಿಗೆ ಶಿಷ್ಯವೇತನದ ಹುಂಡಿಯನ್ನು ಸಲ್ಲಿಸುವುದು.
10. ಶಿಷ್ಯವೇತನದ ಹುಂಡಿಯನ್ನು 2, 3 ಮತ್ತು 4 ತಿಂಗಳು ಒಟ್ಟಿಗೆ ಸೇರಿಸಿ ಸಲ್ಲಿಸುವಂತಿಲ್ಲ, ಸಲ್ಲಿಸಿದಲ್ಲಿ ಸೂಕ್ತ ಕಾರಣ ನೀಡಿ ವಿಭಾಗಧ್ಯಕ್ಷರ ಶಿಫಾರಸ್ಸಿನೊಂದಿಗೆ ಸಲ್ಲಿಸುವುದು.
11. ಆಯಾಯ ವರ್ಷದ **ಸಾದಿಲ್ವಾರು ವೆಚ್ಚವನ್ನು** ಆಯಾಯ ಹಣಕಾಸು ವರ್ಷದೊಳಗೆ ಹುಂಡಿಯನ್ನು ಸಲ್ಲಿಸಿ ಪಡೆಯುವುದು. ಆ ವರ್ಷದೊಳಗೆ ಪಡೆಯದಿದ್ದಲ್ಲಿ ಆ ವರ್ಷದ ಸಾದಿಲ್ವಾರು ವೆಚ್ಚವು ರದ್ದಾಗುತ್ತದೆ.
12. ಶಿಷ್ಯವೇತನದ ಅಂತಿಮ ಹುಂಡಿಯನ್ನು ಸಂಶೋಧನೆ ಮಾಡುತ್ತಿರುವ ವಿಭಾಗ, ಗ್ರಂಥಾಲಯ ಹಾಗೂ ವಿದ್ಯಾರ್ಥಿನಿಲಯಗಳಿಂದ ಬೇ ಬಾಕಿ (No due Certificate) ಪ್ರಮಾಣ ಪತ್ರಗಳೊಂದಿಗೆ ಉಪಕುಲಸಚಿವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಕಛೇರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಸಲ್ಲಿಸಿ ಶಿಷ್ಯವೇತನವನ್ನು ಪಡೆಯುವುದು.
13. ಸಂಶೋಧನೆಗೆ ವರದಿ ಮಾಡಿಕೊಳ್ಳಲು ಯಾವುದೇ ರೀತಿಯ ಪ್ರಯಾಣ ಭತ್ಯೆ/ದಿನಭತ್ಯೆಗಳನ್ನು ನೀಡಲಾಗುವುದಿಲ್ಲ. ಸಂಶೋಧನಾ ವಿದ್ಯಾರ್ಥಿಗಳ ಪ್ರಗತಿಯು ಸರಿಯಿಲ್ಲದಿದ್ದಲ್ಲಿ ಮಾರ್ಗದರ್ಶಕರ ಮತ್ತು ಅಧ್ಯಕ್ಷರ ವರದಿಯ ಮೇರೆಗೆ ಯಾವುದೇ ಸಮಯದಲ್ಲಾದರೂ ಶಿಷ್ಯವೇತನವನ್ನು ರದ್ದುಪಡಿಸಲಾಗುವುದು.
14. ಆಯ್ಕೆಯಾಗಿರುವ ಸಂಶೋಧಕರು ಒಂದು ವರ್ಷದ ನಂತರ ಪ್ರತಿ ವರ್ಷವು ಕನಿಷ್ಠ ಒಂದೊಂದು ಸಂಶೋಧನಾ ಲೇಖನವನ್ನು Scopus/Web of Science/UGC- Care List Journals ನಲ್ಲಿ ಕಡ್ಡಾಯವಾಗಿ ಪ್ರಕಟಿಸಬೇಕು ಮತ್ತು ಸದರಿ ಲೇಖನದಲ್ಲಿ ಮಾರ್ಗದರ್ಶಕರ ಹೆಸರಿರಬೇಕು.
15. ಮೂರು ವರ್ಷದ ನಂತರ ಸಂಶೋಧಕರ ಸಂಶೋಧನಾ ವರದಿಯನ್ನು ಸಂಯೋಜಕರು, ಸಂಶೋಧನಾ ನಿರ್ದೇಶನಾಲಯ, ವಿಷಯಗಳ ಡೀನರು, ವಿಭಾಗಧ್ಯಕ್ಷರು ಮತ್ತು ಮಾರ್ಗದರ್ಶಕರನ್ನೊಳಗೊಂಡ ಸಮಿತಿಯನ್ನು ರಚಿಸಿ ವರದಿ ಬಂದ ನಂತರ ಶಿಷ್ಯವೇತನವನ್ನು ಮುಂದುವರಿಸಲಾಗುವುದು.
16. ವಿಶ್ವವಿದ್ಯಾನಿಲಯದ ನಿಯಮಾನುಸಾರ ಸಂಶೋಧನಾ ವಿದ್ಯಾರ್ಥಿಗಳು ವರ್ಷಕ್ಕೆ 15 ದಿವಸಗಳ ಸಾಂದರ್ಭಿಕ ರಜೆಯನ್ನು ಪಡೆಯಲು ಮಾತ್ರ ಅರ್ಹರಾಗಿರುತ್ತಾರೆ.
17. ಸದರಿ ಸಾಲಿನಲ್ಲಿ ಆಯ್ಕೆಯಾಗಿರುವ ಸಂಶೋಧಕರು ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ಪಡೆಯಲು ಬಯಸಿದಲ್ಲಿ, ಮಾರ್ಚ್ 2022 ರಿಂದ ಲಭ್ಯತೆಯನುಸಾರ ಪ್ರವೇಶಾತಿ ಪಡೆಯುವುದು
18. ಸಂಶೋಧನಾ ವಿದ್ಯಾರ್ಥಿಗಳು **ವಿದ್ಯಾರ್ಥಿನಿಲಯದಲ್ಲಿ ವಾಸವಾಗಿದ್ದರೆ** ವಾಸದ ಬಗ್ಗೆ ದೃಢೀಕರಣವನ್ನು ಕಡ್ಡಾಯವಾಗಿ ನೀಡುವುದು ಶಿಕ್ಷಕ ಸಲಹೆಗಾರರ ಕರ್ತವ್ಯವಾಗಿರುತ್ತದೆ.
19. ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನೆಯನ್ನು ಪೂರ್ಣಕಾಲಿಕವಾಗಿ ತೊಡಗಿಸಿಕೊಳ್ಳುವುದು.

ಆಯ್ಕೆಗೊಂಡಿರುವ ಸಂಶೋಧಕರು ಮೇಲ್ಕಂಡ ಷರತ್ತುಗಳಿಗೆ ಹಾಗೂ ವಿಶ್ವವಿದ್ಯಾನಿಲಯವು ಕಾಲ-ಕಾಲಕ್ಕೆ ಜಾರಿಯಾಗುವ ನಿಯಮಗಳಿಗೆ ಬದ್ಧರಾಗಿರುತ್ತೇವೆ ಎಂಬ ಮುಚ್ಚಳಿಕೆ ಪತ್ರಕ್ಕೆ ಸಹಿ ಮಾಡಿ ವರದಿ ಪತ್ರದೊಂದಿಗೆ ಈ ಕಛೇರಿಗೆ ಸಲ್ಲಿಸುವುದು.

ಸದರಿ ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡಲಾಗುವ ಶಿಷ್ಯವೇತನ, HRA ಮತ್ತು ವಾರ್ಷಿಕ ಸಾದಿಲ್ವಾರು ವೆಚ್ಚವನ್ನು ಆಯಾಯ ವರ್ಷದ ವಿಶ್ವವಿದ್ಯಾನಿಲಯದ **"ಉತ್ತಮೀಕರಣ ಲೆಕ್ಕಶೀರ್ಷಿಕೆ"** ಯಿಂದ ಭರಿಸಲು ಆದೇಶಿಸಲಾಗಿದೆ.

ಆದೇಶದ ಮೇರೆಗೆ

ಕುಲಸಚಿವ 17/12/2021

17/12/21 17/12/21

ಗೆ,

1. ಸಂಬಂಧಪಟ್ಟ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳಿಗೆ
2. ಅಧ್ಯಕ್ಷರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
   **ಸಂಶೋಧನಾ ವಿದ್ಯಾರ್ಥಿಯು ವರದಿ ಮಾಡಿಕೊಳ್ಳುವ ಸಮಯದಲ್ಲಿ ಮುಚ್ಚಳಿಕೆ ಪತ್ರ** ಮತ್ತು ವರದಿ ಮಾಡಿಕೊಂಡ ಪ್ರತಿಯೊಡನೆ ಉಪಕುಲಸಚಿವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಹಾಗೂ ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಹಾಗೂ ಸರ್ಕಾರಿ ಲೆಕ್ಕ ಪರಿಶೋಧಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಕಳುಹಿಸುವುದು. **(ಸೂಚನೆ: ಮುಚ್ಚಳಿಕೆ ಪತ್ರವನ್ನು ಸಂಶೋಧನಾ ವಿದ್ಯಾರ್ಥಿಗಳು ಕಡ್ಡಾಯವಾಗಿ ನೀಡತಕ್ಕದ್ದು)**
3. ಸಂಬಂಧಿಸಿದ ಮಾರ್ಗದರ್ಶಕರುಗಳಿಗೆ
4. ಮಾನ್ಯ ಕುಲಪತಿಯವರ/ಕುಲಸಚಿವರ/ಕುಲಸಚಿವರು (ಪರೀಕ್ಷಾಂಗ) ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
5. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
6. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು
7. ಶಿಕ್ಷಕ ಸಲಹೆಗಾರರು, ಪಿ.ಜಿ. ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್– 2 ಹಾಗೂ ಪಿ.ಜಿ. ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್– 1, ಮೈ.ವಿ.ವಿ. ಸಂಶೋಧನಾ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯದಲ್ಲಿ ವಾಸವಾಗಿರುವುದಾದರೆ, ಮಾಹಿತಿ ನೀಡುವುದು
8. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಮೈಸೂರು ವಿಭಾಗ, ಮೈಸೂರು
9. ಕಛೇರಿ ಪ್ರತಿ